KATK010047762023

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ಸತ್ರ ಮೊಕದ್ದಮೆ.106/2023</u>**

ಪ್ರಾ.ಸಾ. : **1**

ದೋ.ಸಾ. : **6**

ದಿ.**27.11.2025**

| | |
|---|---|
| ಹೆಸರು | : ಚಂದ್ರಶೇಖರ್ |
| ತಂದೆಯ ಹೆಸರು | : ಆಂಜನಪ್ಪ |
| ವಯಸ್ಸು | : **46** ವರ್ಷ |
| ಉದ್ಯೋಗ | : ಪೈಂಟಿಂಗ್ ಕೆಲಸ |
| ವಾಸಸ್ಥಳ | : ಗುಬ್ಬಿ |

ಸಾಕ್ಷಿಯನ್ನು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>**

1. ನನಗೆ ಆರೋಪಿ ಕುಮಾರನ ಪರಿಚಯ ಇದೆ. ಕುಮಾರನ ಹೆಂಡತಿ ಮಾಲ ಗೊತ್ತಿದೆ. ನನಗೆ ಆರೋಪಿ ಕುಮಾರ್ ಮತ್ತು ಆತನ ಹೆಂಡತಿ ಮಾಲ ರವರ ಮಕ್ಕಳು ಗೊತ್ತಿದೆ, ಅವರಿಬ್ಬರೂ ಹೆಣ್ಣುಮಕ್ಕಳು, ಅವರ ಹೆಸರು ಗೊತ್ತಿಲ್ಲ. ನನ್ನ ಮನೆ, ಆರೋಪಿಯ ಮನೆಯಿಂದ **3** ಬೀದಿ ಬಿಟ್ಟು ಇದೆ. ಅವರ ಸಂಸಾರ ಹೇಗಿತ್ತು ಎಂದು ಗೊತ್ತಿಲ್ಲ. ಆರೋಪಿ ಪೈಂಟಿಂಗ್ ಕೆಲಸ ಮಾಡುತ್ತಾನೆ. ಆರೋಪಿಗೆ ಏನು ಚಟ ಇದೆ ಎಂದು ನನಗೆ ಗೊತ್ತಿಲ್ಲ. ಆರೋಪಿ ತನ್ನ ಹೆಂಡತಿಯನ್ನು ಹೇಗೆ ನೋಡಿಕೊಳ್ಳುತ್ತಿದ್ದ ಎಂದು ನನಗೆ ಗೊತ್ತಿಲ್ಲ. ನಾನು ಯಾವತ್ತೂ ಆರೋಪಿಗೆ ಬುದ್ಧಿವಾದ ಹೇಳಿಲ್ಲ. ಆರೋಪಿಯ ಮನೆಯಿಂದ ನಾನು ಯಾವುದೇ ಗಲಾಟೆ ಕೇಳಿಲ್ಲ. ಮಾಲ ಈಗ ಜೀವಂತ ಇಲ್ಲ. ಮಾಲ ಹೇಗೆ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಆಕೆ ತೀರಿಕೊಳ್ಳಲು ಯಾರು ಕಾರಣ ಎಂದು ನನಗೆ ಗೊತ್ತಿಲ್ಲ. ಮಾಲ ಮೃತಪಡುವ ಮೊದಲು ನನ್ನ ಜೊತೆಗೆ ಮಾತನಾಡಿಲ್ಲ, ನನಗೇನೂ ಹೇಳಿಲ್ಲ. ದಿ.**17.07.2022** ರಂದು ನಾನು ಆರೋಪಿಯ ಮನೆಯಿಂದ ಏನೂ ಕೇಳಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

2. ಈಗ ನನಗೆ ತೋರಿಸಿದ ನೋಟೀಸ್ ನಲ್ಲಿ ನನ್ನ ಸಹಿ ಇದೆ. ಆ ನೋಟೀಸನ್ನು ನಿಶಾನೆ ಪಿ1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ1(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಮೃತದೇಹದ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಪಂಚನಾಮೆಯನ್ನು ಪಿ2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ2(ಎ) ಎಂದು ಗುರುತಿಸಲಾಯಿತು. ನಾನು ಗುಬ್ಬಿ ಪೋಲೀಸ್ ಠಾಣೆಯ ಹತ್ತಿರ ಕೆಲಸಕ್ಕೆ ನಡೆದುಕೊಂಡು ಹೋಗುವಾಗ ಪೋಲೀಸರು ಕರೆದು ನನ್ನ ಸಹಿ ತೆಗೆದುಕೊಂಡರು. ನಾನು ಸಹಿ ಮಾಡಿದ ಹಾಳೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ಆರೋಪಿಯ ಗುಡಿಸಲಿಗೆ ಬಂದಿರಲಿಲ್ಲ. ಈಗ ನನಗೆ ತೋರಿಸಿದ ನಿಶಾನೆ ಪಿ2 ಪಂಚನಾಮೆಯಲ್ಲಿ ಫೋಟೋ ಇದೆ. ಆ ಫೋಟೋದಲ್ಲಿ ನಾನು ಇದ್ದೇನೆ. ಆ ಫೋಟೋ ಆರೋಪಿಯ ಗುಡಿಸಲಿನಲ್ಲಿ ತೆಗೆದ ಫೋಟೋ ಆಗಿದೆ. ಕುಮಾರ್ ರವರ ಗುಡಿಸಲಿನಲ್ಲಿ ಮಾಲ ರವರ ಮೃತದೇಹವನ್ನು ನೋಡಲು ಹೋಗಿದ್ದೆ. ಯಾವಾಗ ನಾನು ಆರೋಪಿಯ ಗುಡಿಸಲಿಗೆ ಹೋಗಿದ್ದೆ ಎಂದು ಗೊತ್ತಿಲ್ಲ. ಆಕೆ ಹೇಗೆ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ಮತ್ತು ಮಹಜರಿಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ಮತ್ತು ಮಹಜರಿಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**<u>ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

3. ನನ್ನ ಹಾಗೂ ಕುಮಾರನ ಗುಡಿಸಲು ಒಂದೇ ಗಲ್ಲಿಯಲ್ಲಿದೆ ಎಂದರೆ ಸರಿಯಲ್ಲ. ಕುಮಾರ ಮತ್ತು ಮಾಲ ಪ್ರೀತಿಸಿ ಮದುವೆಯಾಗಿದ್ದು ಬೆಂಗಳೂರಿನಲ್ಲಿ ಪೈಂಟಿಂಗ್ ಕೆಲಸ ಮಾಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ಅವನು ಕೊರೋನಾ

ಬಂದಿದ್ದರಿಂದ ಬೆಂಗಳೂರಿನಲ್ಲಿ ಕೆಲಸ ಸಿಗದೆ ಗುಬ್ಬಿಗೆ ಬಂದು ಬಾಬು ಜಗಜೀವನ ರಾಮ್ ನಗರದ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಗುಡಿಸಲುಕಟ್ಟಿಕೊಂಡು ವಾಸ ಮಾಡುತ್ತಿದ್ದರು ಎಂದರೆ ನಿಜ. ಆರೋಪಿ ದುಡಿದು ಸಂಪಾದನೆ ಮಾಡಿದ ಹಣವನ್ನು ಕುಡಿಯಲು ಉಪಯೋಗಿಸುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಸಾರಾಯಿ ಕುಡಿದು ದಿನಾ ತನ್ನ ಹೆಂಡತಿ ಮಕ್ಕಳ ಜೊತೆಗೆ ಜಗಳ ಮಾಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ನಾನು ಅನೇಕ ಬಾರಿ ಬುದ್ಧಿವಾದ ಹೇಳಿದರೂ ಅವರ ನಡುವೆ ಯಾವತ್ತೂ ಜಗಳ ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಅತಿಯಾಗಿ ಸಾರಾಯಿ ಕುಡಿದು, ಕೆಲಸಕ್ಕೆ ಹೋಗುತ್ತಿರಲಿಲ್ಲ ಮತ್ತು ಮನೆಗೆ ದಿನಸಿ ತಂದು ಹಾಕುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮಾಲ ಸಂಸಾರ ಸಾಗಿಸಲು ಅಲ್ಲಿ, ಇಲ್ಲಿ ಸಾಲ ಮಾಡಿಕೊಂಡಿದ್ದಳು ಎಂದರೆ ನನಗೆ ಗೊತ್ತಿಲ್ಲ. ಆ ಸಾಲವನ್ನು ತೀರಿಸಲು ಕುಮಾರನನ್ನು ಮಾಲ ಕೇಳುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮಾಲಳಿಗೆ ಆತ್ಮಹತ್ಯೆ ಮಾಡಿಕೊಳ್ಳುವ ಅವಾಚ್ಯ ಶಬ್ದಗಳಿಂದ ಬೈದು ಪ್ರಚೋದಿಸುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ನನಗೆ ಸಂಸಾರ ಸಾಕಾಗಿ ಹೋಗಿದೆ, ನನ್ನ ಗಂಡನ ಕಿರುಕುಳ ಸಹಿಸಲು ಆಗುವುದಿಲ್ಲ, ಮಾತೆತ್ತಿದರೆ ನೀನು ಸಾಯಿ ಎಂದು ಹೇಳುತ್ತಿರುತ್ತಾನೆ, ನನಗೆ ಸತ್ತುಹೋಗಬೇಕೆಂದು ಅನಿಸುತ್ತಿದೆ ಎಂದು ನನ್ನಲ್ಲಿ ಹೇಳಿ ಅಳುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ನಾನು ಆಕೆಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ, ಅವರ ಮುಖ ನೋಡಿಕೊಂಡಾದರೂ ಕಷ್ಟನೋ ಸುಖನೋ ಸಂಸಾರ ಮಾಡಿಕೊಂಡು ಹೋಗು ಎಂದು ಬುದ್ಧಿವಾದ ಹೇಳುತ್ತಿದ್ದೆ ಎಂದರೆ ಸರಿಯಲ್ಲ. ಈ ವಿಚಾರವನ್ನು ಮಾಲಳ ತಾಯಿ ಜಯಮ್ಮ ಹಾಗೂ ತಂಗಿ, ನೆಂಟರುಗಳಿಗೆ ಹೇಳಿ ಅವರೂ ಬುದ್ಧಿ ಹೇಳಿ ಹೋಗುತ್ತಿದ್ದರು ಎಂದರೆ ಸರಿಯಲ್ಲ.

4. ದಿ.17.07.2022 ರಂದು ರಾತ್ರಿ 9.30 ಗಂಟೆಗೆ ನಾನು ನಮ್ಮ ಮನೆಯಲ್ಲಿ ಊಟ ಮಾಡಿ ಮಲಗುವ ಸಮಯದಲ್ಲಿ ಆರೋಪಿ ಕುಮಾರ ತನ್ನ ಹೆಂಡತಿ ಮಕ್ಕಳಿಗೆ ಗುಡಿಸಲಿನಲ್ಲಿ ಜೋರಾಗಿ ಗಲಾಟೆ ಮಾಡುತ್ತಿದ್ದು ನೀನು ಸತ್ತುಹೋಗು ಎಂದು ಮಾಲಳಿಗೆ ಪ್ರಚೋದನಕಾರಿ ಮಾತನಾಡುತ್ತಿದ್ದನು ಎಂದರೆ ಸರಿಯಲ್ಲ. ಮರುದಿನ ಅವರ ಮಕ್ಕಳು ಮತ್ತು ಊರಿನವರು ಕೂಗಾಡುವ ಶಬ್ದ ಕೇಳಿ ಅವರ ಮನೆ ಹತ್ತಿರ ಹೋಗಿದ್ದೆನು ಎಂದರೆ ಸರಿಯಲ್ಲ. ಆಗ ಆಕೆ ಗುಡಿಸಲಿನ ಮಧ್ಯದ ಕಬ್ಬಿಣದ ಪೈಪಿಗೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಳು ಎಂದರೆ ಸರಿಯಲ್ಲ. ಅವರನ್ನು

ವಿಚಾರಿಸಿದಾಗ ರಾತ್ರಿ ಆರೋಪಿ ಮಾಲಳ ಜೊತೆಗೆ ಗಲಾಟೆ ಮಾಡಿ ಮಕ್ಕಳನ್ನು ಕರೆದುಕೊಂಡು ಹೋಗಿ ಸುವರ್ಣಮ್ಮ ನ ಮನೆಯಲ್ಲಿ ಮಲಗಿದ್ದಾಗ ಮಾಲ ಒಬ್ಬಳೇ ಇದ್ದು, ಆತ್ಮಹತ್ಯೆ ಮಾಡಿಕೊಂಡಳು, ಈ ಆತ್ಮಹತ್ಯೆಗೆ ಆರೋಪಿಯ ಪ್ರಚೋದನೆ ಮತ್ತು ಕಿರುಕುಳ ಕಾರಣವಾಗಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟಿದ್ದೇನೆಂದು ಹೇಳುವ ಹೇಳಿಕೆಯನ್ನು ನಿಶಾನೆ ಪಿ3 ಎಂದು ಗುರುತಿಸಲಾಯಿತು.

5. ಮರುದಿನ ಪೋಲೀಸರು ಘಟನಾ ಸ್ಥಳಕ್ಕೆ ಬಂದಿದ್ದರು, ಮೃತದೇಹದ ತನಿಖೆ ಮಾಡಿದ್ದರು ಎಂದರೆ ನಿಜ. ಪೋಲೀಸರು ಆಕೆ ನೇಣು ಹಾಕಿಕೊಳ್ಳಲು ಉಪಯೋಗಿಸಿದ ಬಿಳಿ ಸೀರೆ ಮತ್ತು ಆಕೆ ಬರವಣಿಗೆ ಮಾಡಿದ್ದ ಪುಸ್ತಕವನ್ನು ಅಮಾನತ್ತುಪಡಿಸಿಕೊಂಡು ಮಹಜರ್ ಮಾಡಿದರು ಎಂದರೆ ಸರಿಯಲ್ಲ. ಆರೋಪಿ ನನ್ನ ಗೆಳೆಯನಾಗಿದ್ದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ.ಹೆಚ್.ಎನ್.ಗುರುನಂಜೇಗೌಡ, ವಕೀಲರಿಂದ ಆರೋಪಿತನ ಪರವಾಗಿ:</u>**

ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು